ಗುಂಯ್ಗುಟ್ಟದ ದುಂಬಿ ಯಾವುದೂ ಇರಲಿಲ್ಲ. ಮನಸ್ಸನ್ನು ಸೆಳೆದು ಸೆರೆಹಿಡಿಯದುದು ದುಂಬಿಯ ಸದ್ದೇ ಆಗಿರಲಿಲ್ಲ."

ಅಜ್ಞಾತನಾಮಧೇಯನಾದ ಕವಿಯೊಬ್ಬನು ವಸಂತಋತುವನ್ನು ವರ್ಣಿಸಿದ ಪರಿ ಇಂತಿದೆ:

**ಇಹ ಮಧುಪವಧೂನಾಂ ಪೀತಮಲ್ಲೀಮಧೂನಾಂ**
**ವಿಲಸತಿ ಕಮನೀಯಃ ಕಾಕಲೀಸಂಪ್ರದಾಯಃ ।**
**ಇಹ ನಟತಿ ಸಲೀಲಂ ಮಂಜರೀ ವಂಜುಲಸ್ಯ**
**ಪ್ರತಿಪದಮುಪದಿಷ್ಟಾ ದಕ್ಷಿಣೇನಾನಿಲೇನ ॥**

"ಹೆಣ್ಣುದುಂಬಿಗಳು ಮಲ್ಲಿಗೆಯ ಮಕರಂದವನ್ನು ಹೀರಿ ಆನಂದವನ್ನು ಶಬ್ದಿಸುತ್ತಿವೆ. ಅವುಗಳ ದನಿ ವಾದ್ಯವೃಂದದ ನಾದ ದಂತಿದೆ. ಅದಕ್ಕನುಗುಣವಾಗಿ ವಂಜುಲ ವೃಕ್ಷದ ಹೊಂಗೊಂಚಲುಗಳು ನಾಟ್ಯವನ್ನಾಡುತ್ತಿವೆ. ಆ ನಾಟ್ಯಕ್ಕೆ ಬೇಕಾದ ಮಾರ್ಗದರ್ಶನವನ್ನು ಮಲಯಮಾರುತ ನೀಡುತ್ತಿದೆ!"

ವಸಂತಕಾಲದಲ್ಲಿ ಮಾತ್ರ ಕೋಗಿಲೆ ಪಂಚಮವೆಂಬ ಸ್ವರದಲ್ಲಿ ಕೂಗುತ್ತದೆಯಂತೆ. ಇದನ್ನು ಅಮರಸಿಂಹನು, **'ಪುಷ್ಪಸಾಧಾರಣೇ ಕಾಲೇ ಪಿಕಃ ಕೂಜತಿ ಪಂಚಮಮ್'** ಎಂದು ತಿಳಿಸಿದ್ದಾನೆ. ಆ ಕಾಲದಲ್ಲಿ ಕೋಗಿಲೆಗೂ ರಸಾಲವೃಕ್ಷಕ್ಕೂ (ಮಾವಿನಮರಕ್ಕೂ) ನಂಟು ಬೆಳೆಯುತ್ತದೆ. ಇದನ್ನು ಕಾಳಿದಾಸನೂ

**ಚೂತಾಂಕುರಾಸ್ವಾದಕಷಾಯಕಂಠಃ ।**
**ಪುಂಸ್ಕೋಕಿಲೋ ಯನ್ಮಧುರಂ ಚುಕೂಜ ॥**

"ಚೂತಾಂಕುರವನ್ನು ರುಚಿನೋಡಿದುದರಿಂದ ಉಂಟಾದ ಗಂಭಿರವಾದ ಕಂಠದಿಂದ ಗಂಡುಕೋಗಿಲೆ ಕೂಗಿತು" ಎಂದು ಸಮರ್ಥಿಸಿದ್ದಾನೆ. ಇದನ್ನು ಒಬ್ಬ ಸಂಸ್ಕೃತ ಕವಿ ಹೀಗೆ ಬಣ್ಣಿಸುತ್ತಾನೆ:

**ವೇತ್ತಾ ಕೋಕಿಲ ಏವ ಜ್ಞಾತಾ ಚ ರಸಾಲ ಏವ ನಿಯತಮಿದಮ್।**
**ಯಃ ಪಂಚಮಮುದ್ಗಾಯತಿ ಯಸ್ಯಾಸ್ಥಿಷು ಪುಲಕಮುಕುಲಾನಿ ॥**

" ಯೋಗ್ಯತೆಯನ್ನು ತಿಳಿಯಬಲ್ಲದು ಕೋಗಿಲೆಯೊಂದೇ. ನಾದದ ಇಂಪನ್ನು ಅರಿಯಬಲ್ಲುದು ಮಾವಿನಮರ ಒಂದೇ. ಆ ಕೋಗಿಲೆ ಪಂಚಮವನ್ನು ಹಾಡುತ್ತದೆ; ಮಾವಿನಮರದಲ್ಲಿ ಮೊಗ್ಗುಗಳ ರೂಪದಲ್ಲಿ ರೋಮಾಂಚನವುಂಟಾಗುತ್ತದೆ."

ಮಾವಿನ ಮರಕ್ಕೂ ವಸಂತಋತುವಿಗೂ ಅನ್ಯೋನ್ಯ ಸಂಬಂಧ. ಇದನ್ನು ಒಬ್ಬ ಕವಿ ಹೀಗೆ ವರ್ಣಿಸುತ್ತಾನೆ:

**ಕತಿ ಕತಿ ನ ವಸಂತೇ ವಲ್ಲಯಃ ಶಾಖಿನೋ ವಾ**
**ಕಿಸಲಯಸುಮನೋಭಿಃ ಶೋಭಮಾನಾ ಬಭೂವುಃ ।**
**ತದಪಿ ಯುವಜನಾನಾಂ ಪ್ರೀತಯೇ ಕೇವಲೋಽಭೂದ್**
**ಅಭಿನವಕಲಿಕಾಲೀಭಾರಶಾಲೀ ರಸಾಲಃ ॥**

"ವಸಂತಕಾಲದಲ್ಲಿ ಎಷ್ಟೋ ಮರಗಳು ಚಿಗುರಿ ಹೂಬಿಟ್ಟು ಶೋಭಿಸುತ್ತವೆ. ಆದರೆ ತರುಣರಿಗೆ ಪ್ರಿಯವಾಗಿರುವುದು ಮೊಗ್ಗುಗಳ ರಾಶಿಯ ಹೊರೆಯನ್ನು ಹೊತ್ತು ನಿಲ್ಲುವ ಮಾವಿನ ಮರ ಮಾತ್ರ."

'ಸೌಂದರ್ಯಲಹರಿ' ಯಲ್ಲಿ ಶ್ರೀಶಂಕರಾಚಾರ್ಯರು ವಸಂತ ಋತುವನ್ನು ಮನ್ಮಥನ ಸಾಮಂತನೆಂದು ಕರೆದು, ಮನ್ಮಥನ ಸಾಮರ್ಥ್ಯವೆಲ್ಲ ಜಗನ್ಮಾತೆಯ ಕಟಾಕ್ಷದ ಪ್ರಭಾವವೆಂದು ಹೇಳಿದ್ದಾರೆ:

**ಧನುಃ ಮೌರ್ವೀ ಮಧುಕರಮಯೀ ಪಂಚ ವಿಶಿಖಾ**
**ವಸಂತಃ ಸಾಮಂತೋ ಮಲಯಮರುದಾಯೋಧನರಥಃ ।**
**ತಥಾಪ್ಯೇಕಃ ಸರ್ವಂ ಹಿಮಗಿರಿಸುತೇ ಕಾಮಪಿ ಕೃಪಾಮ್**
**ಅಪಾಂಗಾತ್ ತೇ ಲಬ್ಧ್ವಾ ಜಗದಿದಮನಂಗೋ ವಿಜಯತೇ ॥**

"ಮನ್ಮಥನ ಬಳಿ ಇರುವುದು ಒಂದೇ ಹೂವಿನ ಬಿಲ್ಲು. ಅದರ ಹುರಿ ದುಂಬಿಗಳಿಂದ ರಚಿತವಾದುದು. ಆ ಬಿಲ್ಲಿಗೆ ಇರುವುದು ಐದೇ ಬಾಣಗಳು. ಅವನ ಸಾಮಂತನೇ ವಸಂತ; ಮಲಯಮಾರುತವೇ ಯುದ್ಧದ ರಥ. ಇಷ್ಟಾದರೂ ಅವನೊಬ್ಬನೇ ಜಗಜ್ಜನನಿಯ ಕುಡಿಗಣ್ಣ ನೋಟದ ಕೃಪೆಯನ್ನು ಪಡೆದು, ಸಮಸ್ತ ಜಗತ್ತನ್ನೂ ಗೆದ್ದುಬಿಟ್ಟಿದ್ದಾನೆ. ಇದರಿಂದ ಜಗನ್ಮಾತೆಯ ಅನುಗ್ರಹದ ಫಲವೂ ಬಲವೂ ತಿಳಿದುಬರುತ್ತದೆಯಲ್ಲವೇ!"

ವಿವೇಕಚೂಡಾಮಣಿಯಲ್ಲಿ, ಬ್ರಹ್ಮಜ್ಞಾನವನ್ನು ಕರುಣೆಯಿಂದ ನೀಡುವ ಸತ್ಪುರುಷರನ್ನು ವಸಂತಋತುವಿಗೆ ಹೋಲಿಸಲಾಗಿದೆ.

**ಶಾಂತಾ ಮಹಾಂತೋ ನಿವಸಂತಿ ಸಂತೋ**
**ವಸಂತವಲ್ಲೋಕಹಿತಂ ಚರಂತಃ ।**
**ತೀರ್ಣಾಃ ಸ್ವಯಂ ಭೀಮಭವಾರ್ಣವಂ ಜನಾನ್**
**ಅಹೇತುನಾನ್ಯಾನಪಿ ತಾರಯಂತಃ ॥**

"ಶಾಂತರೂ ದೊಡ್ಡವರೂ ಆದ ವಿದ್ವಾಂಸರು ವಸಂತ ಕಾಲದಂತೆ ಪ್ರಪಂಚದ ಹಿತವನ್ನು ಸಾಧಿಸುವವರಾಗಿದ್ದಾರೆ. ಭಯಂಕರವಾದ ಸಂಸಾರಸಾಗರವನ್ನು ದಾಟಿರುವ ಅವರು ಯಾವ ಲಾಭಾಪೇಕ್ಷೆಯನ್ನೂ ಮಾಡದೆ, ಬೇರೆಯವರನ್ನೂ ಅದರಿಂದ ದಾಟಿಸುತ್ತಾರೆ."

ಹೀಗೆ ವೇದಕಾಲದಿಂದ ಇಂದಿನವರೆಗೆ ವಸಂತಋತು ಕವಿಗಳಿಗೆ ಪ್ರೇರಕವಾಗಿದೆ. ಅಂಥ 'ಸುರಭಿ' ಮಾಸವು ಎಲ್ಲರ ಬದುಕಿನಲ್ಲಿ ಸೌರಭವನ್ನು ತರಲಿ.

**ಮಲಯಶಿಖರದಾ ಕೈಲಾಸಮನೋಭವಶಾಸನಾ–**
**ದ್ಭುವನವಲಯಂ ಜೇತುಂ ವಾಂಛನ್ ವಸಂತ ಸಮೀಕರಣಃ।**
**ವಿದಿತವಸತಿಂ ಕೈಲಾಸಗ್ರೇ ಭುಜಂಗಧರಂ ಹರಂ**
**ಮನಸಿ ವಿಮೃಶನ್ ಭೀತಃ ಶಂಕೇ ಪ್ರಯಾಂತಿ ಶನೈಃ ಶನೈಃ ॥**

"ಮಲಯಪರ್ವತದಿಂದ ಹಿಡಿದು, ಮನ್ಮಥನನ್ನು ಅಂಕೆಯಲ್ಲಿಟ್ಟ ಕೈಲಾಸದವರೆಗಿನ ಭೂಮಂಡಲವನ್ನೆಲ್ಲವನ್ನೂ ಗೆಲ್ಲುವ ಆಸೆಯನ್ನು ವಸಂತ ಕಾಲವು ಹೊಂದಿತ್ತು. ಆದರೆ ಕೈಲಾಸ ಪರ್ವತದಲ್ಲಿ ಸರ್ಪಭೂಷಣ ಶಿವನು ವಾಸಿಸುತ್ತಿರುವನೆಂದು ತಿಳಿದು, ಮನಸ್ಸಿನಲ್ಲಿಯೇ ಅಳುಕುತ್ತಿದೆಯೋ ಎಂಬಂತೆ, ಮೆಲ್ಲ ಮೆಲ್ಲಗೆ ಸಾಗುತ್ತಿದೆ."

**– ಅನಾಮಿಕ**

